**ದಿನಾಂಕಃ 22-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ವಕೀಲರಾದ ಶ್ರೀ BCG ವಕೀಲರಿಂದಃ**

ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನಿಜವಿರುತ್ತದೆ. ಅದಕ್ಕೆ ನನ್ನ ಸಹಿ ಇದ್ದು ಅದು ನನ್ನ ಮಾಹಿತಿ ಪ್ರಕಾರ ಸರಿ ಇರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ MMC ವಕೀಲರಿಂದಃ**

ವಾದಿ ಪರ ವಕೀಲರು ಹಾಜರಿದ್ದು ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**

**ದಿನಾಂಕ: 22-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಪ್ರತಿವಾದಿ ಪರ ವಕೀಲರಾದ ಶ್ರೀ BCG ವಕೀಲರಿಂದ:**

ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನಿಜವಿರುತ್ತದೆ. ಅದಕ್ಕೆ ನನ್ನ ಸಹಿ ಇದ್ದು ಅದು ನನ್ನ ಮಾಹಿತಿ ಪ್ರಕಾರ ಸರಿ ಇರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಗಳು ಈ ಕೆಳಕಂಡಂತೆ ಗುರುತಿಸಲಾಯಿತು.

| | | |
|---|---|---|
| **ನಿಡಿ-8** | : | ದಿನಾಂಕ: 23-09-2019 ರಂದು ಕಲಕೇರಿ ಜಮೀನು ಸರ್ವೆ ನಂ.63 ಕ್ಷೇತ್ರ 2 ಎಕರೆ 34 ಗುಂಟೆ ಇದನ್ನು ಹಳ್ಳಮ್ಮ ವಾಲ್ಮೀಕಿ ಮತ್ತು ಶಿವಮ್ಮ ಇವರು ಸಾಕ್ಷಿದಾರ ಶಿವಪ್ಪ ಚಳಾರಿ ಇವರಿಗೆ ಮಾರಾಟ ಮಾಡಿದ ಕುರಿತು ಖರೀದಿ ಪತ್ರದ ಪ್ರತಿ. |
| **ನಿಡಿ-9** | : | ದಿನಾಂಕ: 31-05-2021 ರಂದು ಕಲಕೇರಿ ಜಮೀನು ಸರ್ವೆ ನಂ.63 ಕ್ಷೇತ್ರ 2 ಎಕರೆ 34 ಗುಂಟೆ ಇದನ್ನು ಶಿವಪ್ಪ ಮಲ್ಲಪ್ಪ ಚಳಾರಿ ಇವರು ಮಲ್ಲಪ್ಪ ಭೀಮನಗೌಡರ್ ಇವರಿಗೆ ಮಾರಾಟ ಮಾಡಿದ ಕುರಿತು ಖರೀದಿ ಪತ್ರದ ಪ್ರತಿ. |
| **ನಿಡಿ-10** | : | ಕಲಕೇರಿ ಜಮೀನು ಸರ್ವೆ ನಂ.60/3 ರ 2018-2019, 2019-2020, 2025-2026 ನೇ ಸಾಲಿನ ಪಹಣಿ ಪತ್ರಿಕೆ. |
| **ನಿಡಿ-11** | : | M.R.No.H8/2019-2020 ರ ಪ್ರತಿ. |
| **ನಿಡಿ-12** | : | M.R.No.H42/2021-2022 ರ ಪ್ರತಿ. |

**ಪಾಟೀ ಸವಾಲು: ವಾದಿ ಪರ ವಕೀಲರಾದ ಶ್ರೀ MMC ವಕೀಲರಿಂದ:**

1. ನಮ್ಮ ಊರು ಹಟ್ಟಿ. ಅದು ಕಲಕೇರಿಯಿಂದ 3 ಕಿ.ಮೀ ದೂರದಲ್ಲಿ ಇದೆ. ದಾವಾ ಜಮೀನು ಕಲಕೇರಿ ಹದ್ದಿಯಲ್ಲಿ ಇದೆ ಅಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಗೊತ್ತಿದೆ. ಖರೀದಿ ಮಾಡುವ ಪೂರ್ವ ಜಮೀನು ನೋಡಿ ಬಂದ ದಿನಾಂಕ ನೆನಪಿಲ್ಲ. ಈ ಜಮೀನು ಮಾರುವ ವಿಷಯ ಕಲಕೇರಿ ಗಿರಿಯಪ್ಪ ಹೇಳಿದ. ಮೃತ ದೇವಪ್ಪ ವಾದಿ ನಾಗಪ್ಪನಿಗೆ ಖರೀದಿ ಕರಾರು ಬರೆದುಕೊಟ್ಟ ವಿಷಯ ಗಿರಿಯಪ್ಪ ಮತ್ತು ಗವಿಸಿದ್ದಪ್ಪ ಯಾರು ನನಗೆ ಹೇಳಿಲ್ಲ.

2. ಗವಿಸಿದ್ದಪ್ಪ ಮತ್ತು ಗಿರಿಯಪ್ಪನಿಗೆ ನಾಗಪ್ಪನಿಗೆ ಬರೆದುಕೊಟ್ಟ ಖರೀದಿ ಕರಾರು ಪತ್ರದ ವಿಷಯ ಅವರಿಗೆ ಗೊತ್ತಿತ್ತು. ಆದರೆ ಅವರು ನನಗೆ ಹೇಳಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ದೇವಪ್ಪ ನಾಗಪ್ಪನಿಗೆ ಅಡಮಾನ ಬರೆದುಕೊಟ್ಟ ವಿಷಯ ಆಗ ನನಗೆ ಗೊತ್ತಿತ್ತು ಅಂದರೆ ಸರಿ. ಅದನ್ನು ಹಳ್ಳಮ್ಮ ಮತ್ತು ಶಿವಮ್ಮ ನನಗೆ ಹೇಳಿದ್ದರು. ಖರೀದಿ ಮಾತುಕತೆಯ ಪೂರ್ವ ಆ ಮೊದಲನೇ ವಚನ ಪತ್ರ ನಾನು ನೋಡಿಲ್ಲ. ಅದರಿಂದಾಗಿ ಆ ಅಡಮಾನದ ವಿಷಯ ನನಗೆ ಗೊತ್ತಿಲ್ಲ ಅಂದರೆ ಸರಿ.

3. ನಾಗಪ್ಪ 6 ವರ್ಷ 10 ತಿಂಗಳು ತಡವಾಗಿ ದಾವೆ ಮಾಡಿದ ಎಂಬುದು ಕಾಯ್ದೆ ಕುರಿತು ನನಗೆ ಗೊತ್ತಿಲ್ಲ. ತಡಮಾಡಿ ದಾವೆ ಸಲ್ಲಿಸಲಾಗಿದೆ ಎಂದು ದಾವೆ ಬರೆಯಲು ನಮ್ಮ ವಕೀಲರಿಗೆ ಹೇಳಿಲ್ಲ. ನಮ್ಮ ಜಮೀನು ಖರೀದಿ ಮಾತುಕತೆ ಯಾವ ತಾರೀಖಿಗೆ ಆಯಿತು ಅನ್ನುವುದು ನನಗೆ ಗೊತ್ತಿಲ್ಲ. ಹಳ್ಳಮ್ಮ, ಶಿವಮ್ಮ, ಗಿರಿಯಪ್ಪ ಮತ್ತು ಗವಿಸಿದ್ದಪ್ಪ ಇವರು ಮಾತುಕತೆ ಕಾಲಕ್ಕೆ ಹಾಜರಿದ್ದರು. ಈ ಮಾತುಕತೆ ಕಲಕೇರಿಯಲ್ಲಿ ಆಯಿತು. ಹಳ್ಳಮ್ಮ ಮತ್ತು ಶಿವಮ್ಮಗೆ ಈ ಆಸ್ತಿ ಮಾರುವ ಅಧಿಕಾರ ಇತ್ತು. 11 ಇ ನಕ್ಷೆ ಯಾವಾಗ ತಯಾರಿಸಲಾಯಿತು ನನಗೆ ಗೊತ್ತಿಲ್ಲ. ಖರೀದಿ ಕಾಲಕ್ಕೆ ಆ 11 ಇ ನಕ್ಷೆ ಪಹಣಿ ಮತ್ತು ಮುಟೇಷನ್ ನೋಡಿದ್ದೇನೆ.

4. ಎಷ್ಟು ಹಣಕ್ಕೆ ವ್ಯವಹಾರ ಆಯಿತು ನೆನಪಿಲ್ಲ. ಮಾತುಕತೆ ಆದ ದಿವಸ ನಾನು 50 ಸಾವಿರ ರೂಪಾಯಿ ಮುಂಗಡ ಹಣ ಕೊಟ್ಟಿದ್ದೆ. ಇನ್ನೂಳಿದ ಹಣ ಬ್ಯಾಂಕ್ ಮೂಲಕ ಕೊಟ್ಟಿದ್ದೇನೆ. ಹಳ್ಳಮ್ಮ ಮತ್ತು ಶಿವಮ್ಮ ಇವರ ಬ್ಯಾಂಕ್ ಖಾತೆಗೆ ಹಾಕಿದ್ದೇನೆ. ಹಣ ಕೊಟ್ಟ ತಾರೀಖ್ ನೆನಪಿಲ್ಲ. ನನ್ನದು ಹಳ್ಳಮ್ಮ ಮತ್ತು ಶಿವಮ್ಮ ಜೊತೆ ಯಾವುದೇ ಖರೀದಿ ವ್ಯವಹಾರ ಆಗಿಲ್ಲ ಅಂದರೆ ಸರಿಯಲ್ಲ. ನಾಗಪ್ಪನೊಂದಿಗೆ ಆದ ಖರೀದಿ ಕರಾರು ಪತ್ರಕ್ಕೆ ತೊಂದರೆ ಮಾಡಲು ನನ್ನ ಹೆಸರಿನಲ್ಲಿ ಖರೀದಿ ಪತ್ರ ಸೃಷ್ಟಿ ಮಾಡಲಾಯಿತು ಅಂದರೆ ಸರಿಯಲ್ಲ. ಹಳ್ಳಮ್ಮ ಶಿವಮ್ಮ ಈಗ ಈ ಜಮೀನನ್ನು ವ್ಯವಸಾಯ ಮಾಡುತ್ತಾರೆ ಅಂದರೆ ಸರಿಯಲ್ಲ.

5. ಈಗ ನನ್ನಿಂದ ಈ ಜಮೀನು ಖರೀದಿಸಿದ ಮಲ್ಲಪ್ಪ ಭೀಮನಗೌಡರು ಇವರು ಈ ಜಮೀನು ಸಾಗುವಳಿ ಮಾಡುತ್ತಿದ್ದಾರೆ. ಇವರು ನನ್ನಿಂದ ಈ ಜಮೀನು ಯಾವಾಗ ಖರೀದಿಸಿದರು ಗೊತ್ತಿಲ್ಲ.

ಖರೀದಿ ಮಾಡಿದ ಕಾಲದಿಂದ ಇವರು ಈ ಜಮೀನು ಕಬ್ಜದಲ್ಲಿ ಇದ್ದಾರೆ. ದೇವಪ್ಪ ಮತ್ತು ಆತನ ಕುಟುಂಬದ ಕಡೆಯಿಂದ ವಾದಿ ನಾಗಪ್ಪ ಖರೀದಿ ವಚನ ಪತ್ರ ಬರೆಯಿಸಿಕೊಂಡು ವಂಚನೆ ಮಾಡುತ್ತಿದ್ದಾನೆ ಎಂದು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ನಾಗಪ್ಪ ಖರೀದಿ ವಚನ ಪತ್ರ ಬರೆಯಿಸಿಕೊಂಡ ವಿಷಯ ಈ ಪ್ರಕರಣದಲ್ಲಿ ಕೋರ್ಟಿನಿಂದ ನೋಟೀಸ್ ಬಂದ ನಂತರ ಗೊತ್ತಾಗಿದೆ. ಇದು ಗೊತ್ತಾಗಿ 3 ರಿಂದ 4 ತಿಂಗಳಾಯಿತು. ಅದಕ್ಕಿಂತ ಮೊದಲು ಶಿವಮ್ಮ, ಹಳ್ಳಮ್ಮ ಮತ್ತು ವಾದಿ ನಾಗಪ್ಪ ಇವರ ಮಧ್ಯೆ ಏನು ವ್ಯವಹಾರ ಆಗಿತ್ತು ಅಂತಾ ನನಗೆ ಗೊತ್ತಿಲ್ಲ.

6. ಈ ಜಮೀನನ್ನು ಜೆಸಿಬಿಯಿಂದ ಸ್ವಚ್ಛ ಮಾಡಿಸಿದೆ, ಕೆಇಬಿಯಿಂದ ವಿದ್ಯುತ್ ಸಂಪರ್ಕ ಪಡೆದುಕೊಂಡೆ ಮತ್ತು ನೀರಿನ ಪೈಪ್ ಲೈನ್ ಮಾಡಿಸಿದೆ ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ನಾನು ಈ ಜಮೀನು ಖರೀದಿಸಿದ 8 ರಿಂದ 10 ದಿನದ ನಂತರ ಈ ಕೆಲಸಗಳನ್ನು ಮಾಡಿಸಿದ್ದೇನೆ. ಈ ಎಲ್ಲಾ ಖರ್ಚು ವೆಚ್ಚ ಮಾಡಿದ ನಂತರ ನಾನು ಮಲ್ಲಪ್ಪ ಭೀಮನಗೌಡರ್ ಇವರಿಗೆ ಈ ಆಸ್ತಿ ಮಾರಾಟ ಮಾಡಿದ್ದೇನೆ. ಈ ಆಸ್ತಿಯನ್ನು ಹಳ್ಳಮ್ಮ ಮತ್ತು ಶಿವಮ್ಮ ಇವರಿಂದ ವಾದಿ ನಾಗಪ್ಪ ಖರೀದಿ ಮಾಡಿದರೆ ನನಗೆ ಯಾವುದೇ ರೀತಿಯಿಂದ ಹಾನಿ ಆಗುವುದಿಲ್ಲಾ ಅಂದರೆ ಸರಿ. ಹಳ್ಳಮ್ಮ ಮತ್ತು ಶಿವಮ್ಮ ಇವರೇ ಈಗಲೂ ಸಹ ಈ ಜಮೀನಿನ ಮಾಲೀಕತ್ವ ಮತ್ತು ಕಬ್ಜ ಹೊಂದಿದ್ದಾರೆ ಅನ್ನುವುದು ಸರಿಯಲ್ಲ. ನಾಗಪ್ಪನಿಗೆ ಆಸ್ತಿ ಕೊಡಬಾರದೆಂಬ ದುರಾಲೋಚನೆ ಇಟ್ಟುಕೊಂಡು ನಾನು, ಹಳ್ಳಮ್ಮ ಮತ್ತು ಶಿವಮ್ಮ ಕೂಡಿಕೊಂಡು ನನ್ನ ಹೆಸರಿಗೆ ಖರೀದಿ ಪತ್ರ ಸೃಷ್ಟಿ ಮಾಡಿದೆವು ಅಂದರೆ ಸರಿಯಲ್ಲ.

7. ನಾನು ಈ ಜಮೀನು ಖರೀದಿಸುವ ಕಾಲಕ್ಕೆ ಗವಿಸಿದ್ದಪ್ಪ ಜಂತ್ಲಿ ಇರಲಿಲ್ಲ. ಖರೀದಿ ಮಾತುಕತೆ ವಿಷಯ ಗವಿಸಿದ್ದಪ್ಪ ಜಂತ್ಲಿಯವರಿಗೆ ಗೊತ್ತಿತ್ತು ಅನ್ನುವುದು ನನಗೆ ಗೊತ್ತಿಲ್ಲ. ನಾನು ಖರೀದಿಸಿದ ಜಮೀನಿನ ಚೆಕ್ಬಂಧಿ ನೆನಪಿಲ್ಲ. ನಾನು ಈ ಜಮೀನು ಖರೀದಿಸಿದೆ ಎಂದು ಸುಳ್ಳು ಹೇಳಿದೆ ಅಂದರೆ ಸರಿಯಲ್ಲ.

<u>**ಮರು ವಿಚಾರಣೆಃ ಇಲ್ಲ**</u>

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**